ಹುಕ್ಕೇರಿ ತಾಲೂಕಿನ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರಿ ಸಂಘದಲ್ಲಿ ನಡೆದಿರುವ ಅವ್ಯವಹಾರ

ಶ್ರೀ ಮಲ್ಲಾರಿ ಗೌಡ, ಎಸ್.ಪಾಟೀಲ್ (ಸಂಕೇಶ್ವರ).-- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೦ರ ನಂತರ ಹುಕ್ಕೇರಿ ತಾಲ್ಲೂಕು ಮಾರುಕಟ್ಟೆ ಸಂಸ್ಥೆಯಲ್ಲಿ ಎಷ್ಟು ಸಲ ದುರ್ವ್ಯವಹಾರ ನಡೆದಿದೆ ?

ಆ) ಹಾಗಿದ್ದಲ್ಲಿ ದುರ್ವ್ಯವಹಾರದಲ್ಲಿ ಒಳಪಟ್ಟವರ ಹೆಸರುಗಳೇನು ?

ಇ) ದುರ್ವ್ಯವಹಾರವಾಗಿರುವ ಹಣದ ಮೊತ್ತವೆಷ್ಟು ?

ಈ) ಸಂಘದ ಸಂಪೂರ್ಣ ದುರ್ವ್ಯವಹಾರದ ತನಿಖೆಗಾಗಿ ಇಲಾಖೆಯವರು ಕೈಗೊಂಡಿರುವ ಕ್ರಮವೇನು ಹಾಗೂ ಇದನ್ನು ಸರ್ಕಾರದವರು ಲೋಕಾಯುಕ್ತಕ್ಕೆ ಪಹಿಸದಿರುವುದಕ್ಕೆ ಕಾರಣವೇನು?

ಉ) ಆಡಳಿತ ಮಂಡಳಿಯು ನಿರ್ಲಕ್ಷತನದಿಂದ ಆಗಿರುವ ನಷ್ಟಕ್ಕೆ ಆಡಳಿತ ಮಂಡಳಿಯನ್ನು ಕಾನೂನಿನ ಕ್ರಮಕ್ಕೆ ಒಳಪಡಿಸಲು ತಡವಾಗುತ್ತಿರುವುದಕ್ಕೆ ಕಾರಣವೇನು ಹಾಗೂ ಈಗಲಾದರೂ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಹೆಚ್. ವಿಶ್ವಾನಾಥಯ್ಯ (ಸಹಕಾರ ಸಚಿವರು).--

ಅ) ಎರಡು ಸಲ ದುರ್ವ್ಯವಹಾರವಾದ ವರದಿಯಿದೆ.

ಆ) ೧೯೮೧-೮೨ನೇ ವರ್ಷದ ಆಡಿಟ್ ವರದಿಯ ಪ್ರಕಾರ ಶ್ರೀ ಕೆ.ಬಿ.ಪಾಟೀಲ್ ಗುಮಾಸ್ತರು.
೨) ೧೯೮೬-೮೭ರ ಅವಧಿಯಲ್ಲಿ ಈ ಕೆಳಗಿನ ೪ ನೌಕರರು ಹಣ ದುರುಪಯೋಗ ಮಾಡಿರುವರೆಂದು ಸಹಕಾರಿ ಅಭಿವೃದ್ಧಿ ಅಧಿಕಾರಿಯವರ ವರದಿಯಿಂದ ತಿಳಿದುಬಂದಿದೆ.

೧.	ಎಸ್. ಎಲ್. ಸಮ್ಮಣ್ಣವರ	...	ಹಿಂದಿನ ವ್ಯವಸ್ಥಾಪಕರು.
೨.	ಎಸ್. ಎಸ್. ಕಾರುಬೇಟ	...	ಲೇಖಪಾಲಕ.
೩.	ಎನ್. ಎಂ. ಮೊಗಳಿ	...	ಗೋಡೌನ್ ಕೀಪರ್.
೪.	ಎಂ. ಟಿ. ಪಾಟೀಲ್	...	ಗುಮಾಸ್ತ.

ಇ) ೧) ೧೯೮೧-೮೨ರಲ್ಲಿ ರೂ. ೫೦೬೬-೯೧ಪೈಸೆ ಹಣ ದುರುಪಯೋಗವಾಗಿರುವುದು
೨) ೧೯೮೬-೮೭ರಲ್ಲಿ ದುರುಪಯೋಗವಾದ ಹಣ (ತಾತ್ಕಾಲಿಕ ವರದಿ ಪ್ರಕಾರ) ರೂ. ೧,೫೦,೭೫೬-೪೯.

ಈ) ರೂ. ೫೦೬೬-೯೧ನ್ನು ವಸೂಲಿ ಮಾಡಲು ವ್ಯಾಜ್ಯಮಾಡಲಾಗಿದೆ. ೧೯೮೬-೮೭ರಲ್ಲಿ ದುರುಪಯೋಗವಾದ ರೂ. ೧,೫೦,೭೫೬-೪೯ರ ಪೈಕಿ ೯೭.೭೮೬-೬೦ಗಳನ್ನು ಇಲಾಖೆಯ ಪ್ರಯತ್ನದಿಂದ ವಸೂಲಾತಿಯಾಗಿದೆ. ದುರುಪಯೋಗವಾದ ಹಣ ಮತ್ತು ಜವಾಬ್ದಾರಿಯನ್ನು ನಿಖರವಾಗಿ ಗೊತ್ತುಪಡಿಸಿ ಸಂಬಂಧಪಟ್ಟವರಿಂದ ವಸೂಲಿ ಮಾಡುವ ಉದ್ದೇಶದಿಂದ ಸಂಘದ ೮೬-೮೭ನೇ ವರ್ಷದ ಲೆಕ್ಕ ಪರಿಶೋಧನೆ ಕಾರ್ಯವನ್ನು ತೀವ್ರಗೊಳಿಸಲು ಲೆಕ್ಕ ಪರಿಶೋಧನಾ ಇಲಾಖೆಗೆ ಸೂಚಿಸಲಾಗಿದೆ. ಪರಿಶೋಧನೆಯು ಪ್ರಗತಿಯಲ್ಲಿದೆ. ಲೆಕ್ಕ ಪರಿಶೋಧನೆ ಮುಗಿದ ನಂತರ ತಪ್ಪಿತಸ್ಥರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಕ್ರಮ ಕೈಗೊಳ್ಳಲಾಗುವುದು. ಆದುದರಿಂದ ಲೋಕಾಯುಕ್ತಕ್ಕೆ ಸದ್ಯಕ್ಕೆ ಈ ಪ್ರಕರಣದಲ್ಲಿ ತನಿಖೆಗೆ ವಹಿಸಬೇಕಾದ ಅವಶ್ಯಕತೆ ಇರುವುದಿಲ್ಲ.

ಉ) ಸಂಘದ ಆಡಳಿತ ಮಂಡಳಿಯ ಮೇಲೆ ಕ್ರಮ ಕೈಗೊಳ್ಳುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.